ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-I:13(5)-21: 347 :2021-22 ದಿನಾಂಕ:08-12-2021

ಮಾನ್ಯರೆ, .

ವಿಷಯ: ದಿನಾಂಕ:30-11-2021ರಂದು ನಡೆದ **"ವಿಶೇಷ ಸಿಂಡಿಕೇಟ್ ಸಭೆ"ಯ** ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-I ರ ಪ್ರಕರಣ-3 ರನ್ವಯ **ದಿನಾಂಕ:30-11-2021 ರಂದು ಮಂಗಳವಾರ ಅಪರಾಹ್ನ : 02.00 ಗಂಟೆಗೆ** ನಡೆದ **" ಶತಮಾನೋತ್ಸ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"** ಇಲ್ಲಿ ನಡೆದ **"ವಿಶೇಷ ಸಿಂಡಿಕೇಟ್ ಸಭೆ"**ಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-Iರ ಪ್ರಕರಣ - 22 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:30-11-2021 ರಂದು ಮಂಗಳವಾರ ಅಪರಾಹ್ನ : 02.00 ಗಂಟೆಗೆ ನಡೆದ " ಶತಮಾನೋತ್ಸ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಸಿ.ಎಂ. ತ್ಯಾಗರಾಜ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಅಶೋಕ್ ಡಿ.ರೇವಣ್‌ಕರ್, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀ ಧರ್ಮ ಪ್ರಸಾದ್ ಜಿ. | ಸದಸ್ಯರು |
| 10. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 11. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 12. | ಪ್ರೊ. ಕೃಷ್ಣ ವಿ., ಪ್ರಾಧ್ಯಾಪಕರು | ಸದಸ್ಯರು |
| 13. | ಡಾ. ಯುವರಾಜ ಬಿ. ಹೆಚ್. ಪ್ರಾಂಶುಪಾಲರು | ಸದಸ್ಯರು |
| 14. | ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು | ಸದಸ್ಯರು |
| 15. | ಡಾ. ವಿಷ್ಣುಮೂರ್ತಿ ಕೆ.ಎ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

| | | |
|---|---|---|
| 1. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 2. | ಪ್ರೊ. ಹೆಚ್.ಎನ್. ರಮೇಶ್ | ಸದಸ್ಯರು |

**ಪ್ರಸ್ತಾವನೆ:** ಪ್ರಾರಂಭದಲ್ಲಿ ಕುಲಸಚಿವರು ಸಭೆಗೆ ಆಗಮಿಸಿದ ಮಾನ್ಯ ಕುಲಪತಿಗಳು ಹಾಗೂ ಸದಸ್ಯರುಗಳೆಲ್ಲರಿಗೂ ಸ್ವಾಗತ ಕೋರಿದರು. ನಂತರ ಮಾತನಾಡಿ ಕುವೆಂಪು ವಿಶ್ವವಿದ್ಯಾಲಯದ ದೂರಶಿಕ್ಷಣದ ಅಡಿಯಲ್ಲಿ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (ಪ್ರಥಮ ಮತ್ತು ದ್ವಿತೀಯ ಆವೃತ್ತಿ) ವಿದ್ಯಾರ್ಥಿಗಳಿಗೆ ಕೋವಿಡ್-19 ಹಿನ್ನೆಲೆಯಲ್ಲಿ ಪರೀಕ್ಷೆ / ಫಲಿತಾಂಶ ಪ್ರಕಟಿಸುವ ಕುರಿತು ಈ ಹಿಂದೆ ಎರಡು ಬಾರಿ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚೆಯಾಗಿ ಯಾವುದೇ ನಿರ್ಣಯಕ್ಕೆ ಬಾರದೇ ಇರುವುದರಿಂದ ಹಾಗೂ ವಿದ್ಯಾರ್ಥಿಗಳು ಪದೇ ಪದೇ ಪರೀಕ್ಷಾಂಗ ಮತ್ತು ದೂರಶಿಕ್ಷಣ ವಿಭಾಗಗಳನ್ನು ಸಂಪರ್ಕಿಸಿ ಫಲಿತಾಂಶದ ಬಗ್ಗೆ ಕೋರುತ್ತಿರುವುದರಿಂದ ಅಲ್ಲದೇ ಈಗಾಗಲೇ ಸಾಕಷ್ಟು ವಿಳಂಬವಾಗಿರುವ ಹಿನ್ನೆಲೆಯಲ್ಲಿ ಕುಲಪತಿಗಳ ಅನುಮೋದನೆಯೊಂದಿಗೆ ಈ ವಿಶೇಷ ಸಭೆಯನ್ನು ಆಯೋಜಿಸಲಾಗಿದೆ ಎಂದರು.

ಮುಂದುವರೆದು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಪ್ರಸ್ತುತ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಚುನಾವಣೆ ನಿಗದಿಯಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ನಿಯಮಾನುಸಾರ ಶೈಕ್ಷಣಿಕ ವಿಷಯವಾದ್ದರಿಂದ ಅನುಮತಿ ನೀಡುವಂತೆ ಜಿಲಾಧಿಕಾರಿಗಳಿಗೆ ಪತ್ರ ಬರೆದು ಕೆಲವು ಷರತ್ತುಗಳೊಂದಿಗೆ ಅನುಮತಿಯನ್ನು ನೀಡಿರುವ ಅಂಶವನ್ನು ಸಹ ಸಭೆಯ ಗಮನಕ್ಕೆ ತಂದರು. ಮಾನ್ಯ ಕುಲಪತಿಗಳು ಸಭೆಯನ್ನು ಮುಂದುವರೆಸಬೇಕು ಎಂದು ಕೋರಿದರು.

ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಪತಿಯವರು ಆತ್ಮೀಯವಾಗಿ ಮತ್ತೊಮ್ಮೆ ಸ್ವಾಗತ ಕೋರಿದರು. ಮುಂದುವರೆದು ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಎರಡು ವಿಷಯಗಳ ಚರ್ಚೆ ಹಾಗೂ ನಿರ್ಣಯಕ್ಕಾಗಿ ಈ ವಿಶೇಷ ಸಭೆ ಕರೆಯಲಾಗಿದೆ. ಮೊದಲನೆಯದಾಗಿ 2019-20ನೇ ಸಾಲಿನಲ್ಲಿ ದೂರ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕೋವಿಡ್ 19 ಕಾರಣದ ಹಿನ್ನೆಲೆಯಲ್ಲಿ ಯುಜಿಸಿ / ಸರ್ಕಾರದ ಆದೇಶಗಳ ಹಿನ್ನೆಲೆಯಲ್ಲಿ ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರ / ರಾಜ್ಯಸರ್ಕಾರ, ಉನ್ನತ ಶಿಕ್ಷಣ ಸಚಿವರು ಕೂಡ ಈ ನಿರ್ಧಾರ ಸರಿಯಾಗಿದೆ ಎಂದು ಹೇಳುತಿದ್ದಾರೆ, ಆದರೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಾಪಕರ ಸಂಘ ಮಾತ್ರ ಇದಕ್ಕೆ ವಿರೋಧ ವ್ಯಕ್ತ ಪಡಿಸುತ್ತಿದೆ. ಕುಲಸಚಿವ (ಮೌಲ್ಯಮಾಪನ)ರವರು ನಿಯಮಾನುಸಾರವೇ ಕ್ರಮ ಕೈಗೊಳ್ಳುತಿದ್ದಾರೆ. ಇದು ವಿಶ್ವವಿದ್ಯಾಲಯದ ನಿರ್ಧಾರವಲ್ಲ ಈ ನಿರ್ಧಾರ ತೆಗೆದುಕೊಂಡಿರುವುದು ಯುಜಿಸಿ ಮತ್ತು ರಾಜ್ಯ ಸರ್ಕಾರ ಎಂದರು. ಈ ಹಿಂದಿನ ಕುಲಸಚಿವರು(ಮೌಲ್ಯಮಾಪನ)ರವರು ಇದ್ದಾಗಲೇ ಈ ನಿರ್ಣಯ ತೆಗೆದುಕೊಳ್ಳಲಾಗಿತ್ತು, ಅವರು ಪರೀಕ್ಷೆ ನಡೆಸಲು ವೇಳಾಪಟ್ಟಿ ಸಿದ್ದಪಡಿಸಿ, ಪರೀಕ್ಷೆಗೆ ಸಿದ್ದತೆ ನಡೆಸಿದ್ದರು ಆದರೆ ಆದರೆ ಕೋವಿಡ್-19 ಕಾರಣ ಪರೀಕ್ಷೆ ನಡೆಸಲು ಸಾಧ್ಯವಾಗಿರುವುದಿಲ್ಲ ಎಂದರು. ಆದ್ದರಿಂದ ಸರ್ಕಾರದ ಆದೇಶದನ್ವಯ ಕ್ರಮಕೈಗೊಳ್ಳಲು ಸದಸ್ಯರೆಲ್ಲರೂ ಸಹಕಾರ ನೀಡಬೇಕು ಎಂದರು.

ಇನ್ನು ಎರಡನೆಯ ವಿಷಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಕ್ರಮಕೈಗೊಳ್ಳಬೇಕಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಸಾಫ್ಟ್‌ವೇರ್ ಅಳವಡಿಸಿಕೊಂಡಿರುವುದರಿಂದ ಸದರಿ ತಂತ್ರಾಂಶದ ಮೂಲಕ ಆನ್‌ಲೈನ್ ಮೂಲಕ ಪ್ರವೇಶ ಪ್ರಕ್ರಿಯೆ ಕೈಗೊಳ್ಳಬೇಕು ಎಂದರು. ಜಾಗತಿಕ ಯುಗದಲ್ಲಿ ತಂತ್ರಾಂಶಗಳನ್ನು ಅಳವಡಿಸಿಕೊಂಡು ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ತಾವು ಸಹಕರಿಸಬೇಕು. ಅದರಂತೆ ಅಲ್ಯುಮಿನಿಗೆ ಸಂಬಂಧಿಸಿದ ಸಾಫ್ಟ್‌ವೇರ್ ಕೂಡ ಉತ್ತಮ ಪ್ರಾಜೆಕ್ಟ್, ಇವು ತುಂಬಾ ಒಳ್ಳೆಯ ಪ್ರಾಜೆಕ್ಟ್‌ಗಳು. ಇವುಗಳಿಂದ ಒಬ್ಬರಿಂದ ಇನ್ನೊಬ್ಬರಿಗೆ ಸಹಾಯವಾಗುತ್ತದೆ. ಈ ಯೋಜನೆಯಿಂದ ಪ್ರಸ್ತುತ ವಿದ್ಯಾರ್ಥಿಗಳು ಹಿರಿಯ ವಿದ್ಯಾರ್ಥಿಗಳಿಂದ ಮಾರ್ಗದರ್ಶನ ಪಡೆದು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಹಾಗೂ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಇವುಗಳನ್ನೆಲ್ಲಾ ಜಾರಿಗೆ ತರಲು ತಾವು ಸಹಕಾರ ನೀಡಬೇಕು ಎಂದರು.

ಈ ಮಧ್ಯೆ ಮಾತನಾಡಿದ ಕುಲಸಚಿವರು ವಿಶೇಷ ಸಿಂಡಿಕೇಟ್ ಸಭೆಯನ್ನು ಏರ್ಪಡಿಸಿರುವುದರಿಂದ ಶೈಕ್ಷಣಿಕ ಕಾರ್ಯಸೂಚಿಗೆ ಸೀಮಿತವಾಗಿ ಚರ್ಚೆಗೆ ಅವಕಾಶ ಕಲ್ಪಿಸಿರುವುದರಿಂದ ಈ ವಿಷಯವನ್ನಷ್ಟೇ ಚರ್ಚಿಸಿ ನಿರ್ಣಯ ಕೈಗೊಳ್ಳುವುದು ಸೂಕ್ತವೆಂದರು. ಇದಕ್ಕೆ ಕುಲಪತಿಗಳು ಒಪ್ಪಿದರು.

ಸದಸ್ಯರಾದ ಶ್ರೀ ರಮೇಶಬಾಬುರವರು ಮಾತನಾಡಿ, ನಾವುಗಳು ಕೂಡ ಶಿಕ್ಷಣ ತಜ್ಞರಾಗಿದ್ದು, ವಿಶ್ವವಿದ್ಯಾಲಯದ ಒಳಿತನ್ನೇ ಬಯಸುತ್ತೇವೆ. ವಿಶ್ವವಿದ್ಯಾಲಯದ ಉನ್ನತಿಗಾಗಿ ಏನು ಮಾಡಬಹುದೆಂಬ ಬಗ್ಗೆ ಮಾಹಿತಿಯನ್ನು ಕ್ರೋಢೀಕರಿಸಿಕೊಂಡು ಸಭೆಗೆ ಬಂದಿರುತ್ತೇವೆ. ಎಲ್ಲದಕ್ಕೂ ವಿರೋಧ ಮಾಡಲು ಬಂದಿರುವುದಿಲ್ಲ ಎಂದರು. ಇದಕ್ಕೆ ಸದಸ್ಯರಾದ ಶ್ರೀ ರಾಮಲಿಂಗಪ್ಪ ಧ್ವನಿಗೂಡಿಸಿದರು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಇಷ್ಟು ತುರ್ತಾಗಿ ಸಭೆ ಕರೆಯಲು ಕಾರಣವೇನು ಎಂದರು.

ಇದಕ್ಕೆ ಕುಲಸಚಿವರು ಮಾತನಾಡಿ ಈಗಾಗಲೇ ಹೇಳಿದಂತೆ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಣೆ ವಿಳಂಬವಾಗಿರುವುದರಿಂದ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಮಾನ್ಯಕುಲಪತಿಗಳ ಆದೇಶದಂತೆ ಸಭೆ ಕರೆಯಲಾಗಿದೆ ಎಂದರು.

## ದಿನಾಂಕ:30-11-2021 ರ ವಿಶೇಷ ಸಿಂಡಿಕೇಟ್ ಸಭೆಯ ವಿಷಯಗಳು :

### ಪರೀಕ್ಷಾ ವಿಭಾಗ

**2021-ಸಿಂ-ವಿ-1.01:** ಕುವೆಂಪು ವಿಶ್ವವಿದ್ಯಾಲಯದ ದೂರಶಿಕ್ಷಣ ಅಡಿಯಲ್ಲಿ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (ಪ್ರಥಮ ಮತ್ತು ದ್ವಿತೀಯ ಆವೃತ್ತಿ) ವಿದ್ಯಾರ್ಥಿಗಳಿಗೆ ಕೋವಿಡ್-19 ಹಿನ್ನೆಲೆಯಲ್ಲಿ ಫಲಿತಾಂಶವನ್ನು ಪ್ರಕಟಿಸುವ ಕುರಿತು.

**ಚರ್ಚೆ :** ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ 2019ರಲ್ಲಿ ದೂರಶಿಕ್ಷಣದ ಸ್ನಾತಕೋತ್ತರ ಪದವಿ ಹಾಗೂ ಸ್ನಾತಕ ಪದವಿ ಸೇರಿ ಒಟ್ಟು 16612 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು 2022ರ ಜುಲೈಗೆ ಅವರು ತಮ್ಮ ಪದವಿಯನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ ಇನ್ನೂ ಪ್ರಥಮ ವರ್ಷವನ್ನೇ ಪೂರ್ಣಗೊಳಿಸಿರುವುದಿಲ್ಲ.2020ರ ಮಾರ್ಚ-ಏಪ್ರಿಲ್ ನಲ್ಲಿ ಕೋವಿಡ್ -19ರ ಕಾರಣದಿಂದ ಕಛೇರಿ ಹಾಗೂ ತರಗತಿಗಳು ರದ್ದಾದ ಕಾರಣ ಪರೀಕ್ಷೆ ನಡೆಸುವ ಕಾರ್ಯದಲ್ಲಿ ವ್ಯತ್ಯಯವಾಗಿತ್ತು. 1ನೇ ಅಲೆ ಕಡಿಮೆಯಾದ ನಂತರ ಯುಜಿಸಿ ಪ್ರಕಟಣೆ ಹೊರಡಿಸಿ 2019-20ನೇ ಸಾಲಿನ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆಗೊಳಿಸುವ ಬಗ್ಗೆ ಆರ್ಧೇಶಿಸಿರುತ್ತಾರೆ. ಅದರಂತೆ ರಾಜ್ಯ ಸರ್ಕಾರವು ಕೂಡ ಆದೇಶ ನೀಡಿರುತ್ತದೆ. ದಿನಾಂಕ:05-03-2021ರಿಂದ ಪರೀಕ್ಷೆ ನಡೆಸಲು ವೇಳಾಪಟ್ಟಿ ಪ್ರಕಟಿಸಲಾಗಿತ್ತು. ಪರೀಕ್ಷೆ ನಡೆಸುವ ಸಂಬಂಧ ಸಾಧಕ ಭಾದಕ ಚರ್ಚಿಸಲು ದಿನಾಂಕ:24-02-2021 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳ ಸಭೆ ಕರೆಯಲಾಗಿತ್ತು. ಆ ಸಭೆಯಲ್ಲಿ ಎಲ್ಲಾ ಸಂಯೋಜನಾದಿಕಾರಿಗಳು ಬಾಕಿಯಿರುವ ಶುಲ್ಕ ಪಾವತಿಸಲು ಹೆಚ್ಚಿನ ಕಾಲಾವಕಾಶ ಕೋರಿದ್ದರಿಂದ ಪರೀಕ್ಷೆ ಮುಂದೂಡಿ, ದಿನಾಂಕ 19-04-2021ರಿಂದ ಪರೀಕ್ಷೆ ನಡೆಸಲು ತೀರ್ಮಾನಿಸಲಾಯಿತು. ಆದರೆ ಕೋವಿಡ್ -19 2ನೇ ಅಲೆ ಕಾರಣದಿಂದ ಎಪ್ರಿಲ್ 2021ರಿಂದ ಸರ್ಕಾರ ಲಾಕ್ ಡೌನ್ ಘೋಷಿಸಿದ್ದರಿಂದ ಪರೀಕ್ಷೆ ನಡೆಸಲಾಗಲಿಲ್ಲ ಎಂದರು.

ಈ ಮಧ್ಯೆ ಕೆಲವು ಸಂಘ ಸಂಸ್ಥೆಗಳು ಹಾಗೂ ಮಾಧ್ಯಮಗಳಿಂದ 2019-20ನೇ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಕೋರಿಕೆಗಳು ಬಂದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಆಂತರಿಕ ಅಂಕಗಳ ಆಧಾರದ ಮೇಲೆ ತೇರ್ಗಡೆ ಮಾಡಲು ಸಾರಲೇಖನ ಪುಸ್ತಕಗಳಿಗೆ ಕುಲಸಚಿವರ ಸಹಿಯೊಂದಿಗೆ ಕುಲಸಚಿವರು(ಪರೀಕ್ಷಾಂಗ) ರವರಿಗೆ ಸಲ್ಲಿಸಲು ಹಾಗೂ ಕುಲಸಚಿವ(ಪರೀಕ್ಷಾಂಗ)ರವರು ಬಿ.ಒ.ಎ.ಯಿಂದ ಅನುಮೋದಿಸಲ್ಪಟ್ಟ ಅಧ್ಯಾಪಕರಿಂದ ಸರ್ಕಾರದ ಆದೇಶದ ಪ್ರಕಾರ ಫಾರ್ಮುಲಾ ಇಟ್ಟುಕೊಂಡು ಮೌಲ್ಯ ಮಾಪನ ಮಾಡಿ ಫಲಿತಾಂಶ ಪ್ರಕಟಿಸಲು ಆದೇಶಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಥಮ & ದ್ವಿತೀಯ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ ಮುಂದಿನ ತರಗತಿಗಳಿಗೆ ಮಾತ್ರ ತೇರ್ಗಡೆ ಮಾಡಲು ಕ್ರಮವಹಿಸಲಾಗಿದೆ.

ಈ ವಿಷಯಕ್ಕೆ ಸ್ನಾತಕೋತ್ತರ ಅಧ್ಯಾಪಕರ ಸಂಘದವರು ದೂರ ಶಿಕ್ಷಣ ವಿದ್ಯಾರ್ಥಿಗಳನ್ನು ಪರೀಕ್ಷೆ ನಡೆಸದೆ ಆಂತರಿಕ ಅಂಕಗಳ ಆಧಾರದ ಮೇಲೆ ತೇರ್ಗಡೆಗೊಳಿಸುವುದು ನಿಯಮಬಾಹಿರ ಕ್ರಮ ಇದರಿಂದ ವಿದ್ಯಾಭ್ಯಾಸದ ಗುಣಮಟ್ಟ ಕಡಿಮೆಯಾಗುತ್ತದೆ ಮುಂದಿನ ದಿನಗಳಲ್ಲಿ ಪದವಿಯೇ ಅಮಾನ್ಯವಾಗುವ ಸಾಧ್ಯತೆ ಇರುತ್ತದೆ ಇದರ ಬಗ್ಗೆ ಪರಿಶೀಲಿಸಿ ತಮಗೆ ಮಾಹಿತಿ ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ.

ಇದು ಅವರ ಅಭಿಪ್ರಾಯ, ಅವರು ಯಾವುದೇ ನಿಯಮ ಉಲ್ಲೇಖಿಸಿಲ್ಲ.

ದೂರಶಿಕ್ಷಣ ನಿರ್ದೇಶನಾಲಯದಡಿ ಪ್ರಥಮ / ದ್ವಿತೀಯ ವರ್ಷದ ಸ್ನಾತಕ ಹಾಗೂ ಪ್ರಥಮ ವರ್ಷದ ಸ್ನಾತಕೋತ್ತರ ಕೋರ್ಸುಗಳಲ್ಲಿ ಅಧ್ಯಯನ ಮಾಡುತ್ತಿರುವ 2019-20ನೇ ಸಾಲಿನ ವಿದ್ಯಾರ್ಥಿಗಳಿಗೆ ಕೋವಿಡ್-19 ಕಾರಣದಿಂದ ಯುಜಿಸಿ ಹಾಗೂ ಕರ್ನಾಟಕ ಸರ್ಕಾರದ ನಿಯಮಾವಳಿಯಂತೆ ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕಾನೂನು ಪರಿಣಿತರ ಹಾಗೂ ನ್ಯಾಯಾಂಗ ಸಲಹೆಗಾರರಿಂದ ಅಭಿಪ್ರಾಯ ಪಡೆಯಲಾಗಿದೆ ಎಂದರು. ಅಲ್ಲದೇ ನಿಯಮಗಳನ್ನು ಆಧರಿಸಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಯಾವುದೇ ತೊಂದರೆಗಳು ಆಗಬಾರದೆಂಬ ದೃಷ್ಟಿಯಿಂದ ಸಾಧಕ-ಭಾದಕಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

2019-20ನೇ ಸಾಲಿನ 16100 ವಿದ್ಯಾರ್ಥಿಗಳಿದ್ದು ಇವರಲ್ಲಿ ಹಲವರು ಪ್ರತಿದಿನ ದೂರವಾಣಿ ಮೂಲಕ ತಮ್ಮ ಗೋಳು ಹೇಳಿಕೊಳ್ಳುತ್ತಿದ್ದಾರೆ. ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಕೆಲವರದ್ದು ಕೆ.ಸೆಟ್ ಪರೀಕ್ಷೆ ಉತ್ತೀರ್ಣರಾಗಿರುತ್ತಾರೆ. ಹಲವಾರು ವಿದ್ಯಾರ್ಥಿಗಳು ಅವಕಾಶ ವಂಚಿತರಾಗಿದ್ದಾರೆ. ಫಲಿತಾಂಶ ಕೊಡಬೇಕಾಗಿದೆ. ಈಗಾಗಲೇ ಯುಜಿಸಿ/ ಕರ್ನಾಟಕ ಸರ್ಕಾರದ ಮಾರ್ಗಸೂಚಿಯಂತೆ ಕೆ.ಎಸ್.ಓ.ಯು ಮೈಸೂರು ವಿಶ್ವವಿದ್ಯಾಲಯದಲ್ಲಿ ಕ್ರಮಕೈಗೊಂಡಿರುತ್ತಾರೆ.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರದ ಆದೇಶ ದಿನಾಂಕ:10-07-2020ರ ಮತ್ತು ಯುಜಿಸಿಯ ಮಾರ್ಗಸೂಚಿಯಂತೆ 2019-20ನೇ ಸಾಲಿನ ಪ್ರಥಮ / ದ್ವಿತೀಯ ವರ್ಷದ ಸ್ನಾತಕ ಹಾಗೂ ಪ್ರಥಮ ವರ್ಷದ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳ ಆಂತರಿಕ ಅಂಕ / ಹಿಂದಿನ ವರ್ಷದ ಅಂಕಗಳ ಆಧಾರದ ಮೇಲೆ ತೇರ್ಗಡೆಗೊಳಿಸಲು ಆದೇಶ ಹೊರಡಿಸಲಾಗಿರುತ್ತದೆ. ಈಗಾಗಲೇ ಎರಡು ವರ್ಷಗಳಿಂದ ಕೋವಿಡ್ ಕಾರಣದಿಂದ ಫಲಿತಾಂಶ ಪ್ರಕಟಿಸಲು ವಿಳಂಬವಾಗಿದ್ದು ವಿದ್ಯಾರ್ಥಿಗಳ ದೂರು ನೋವು, ಗೋಳು, ಬೆದರಿಕೆಗಳು, ಆತ್ಮಹತ್ಯೆ ಸನ್ನಿಹಿತ ವರ್ತನೆಗಳು ವ್ಯಕ್ತವಾಗಿದ್ದು, ಎರಡು ವರ್ಷಗಳಿಂದ ಪರೀಕ್ಷೆ ನಡೆಯದಿರುವುದರಿಂದ ವಿದ್ಯಾರ್ಥಿಗಳು ಮುಂದಿನ ಅವಕಾಶಗಳಿಂದ ವಂಚಿತರಾಗಿದ್ದು ಸಂಕಷ್ಟಕ್ಕೀಡಾಗಿರುವುದರಿಂದ ಮೇಲ್ಕಂಡ ಕ್ರಮಕೈಗೊಳ್ಳಲಾಗುತ್ತಿದೆ ಆದ್ದರಿಂದ ಸರ್ಕಾರದ ಆದೇಶದನ್ವಯ ಕ್ರಮ ಕೈಗೊಳ್ಳಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವ (ಪರೀಕ್ಷಾಂಗ)ರವರು ಸ್ನಾತಕೋತ್ತರ ಅಧ್ಯಾಪಕರ ಸಂಘದಿಂದ ವಿರೋಧವಿದೆ ಎಂದು ಹೇಳುತ್ತಿರುವುದರಿಂದ ಸ್ನಾತಕೋತ್ತರ ಅಧ್ಯಾಪಕರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಸಭೆಗೆ ಕರೆಸಿ ಅವರ ಅಭಿಪ್ರಾಯ ಪಡೆಯುವುದು ಸೂಕ್ತ ಎಂದರು. ಕುಲಸಚಿವ (ಪರೀಕ್ಷಾಂಗ)ರವರು ದೂರಶಿಕ್ಷಣ ನಿರ್ದೇಶಕರನ್ನೂ ಕರೆಸಿದರೆ ವಿದ್ಯಾರ್ಥಿಗಳು ಯಾವ ರೀತಿ ಮನವಿ ಮಾಡುತ್ತಿದ್ದಾರೆ ಎಂದು ತಿಳಿಯುವುದರಿಂದ ಅವರನ್ನು ಕರೆಸಬಹುದು ಎಂದರು. ಮಾನ್ಯ ಕುಲಪತಿಗಳು ಸದರಿಯವರನ್ನು ಸಭೆಗೆ ಕರೆಸಲು ತಿಳಿಸಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್.. ಇವರು ಮಾತನಾಡಿ 2019ನೇ ಸಾಲಿನಲ್ಲಿಯೇ

ಕೆಲವು ವಿದ್ಯಾಥಿಗಳಿಗೆ ಪರೀಕ್ಷೆ ಮಾಡಲಾಗಿದೆ ಕೆಲವು ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಿಲ್ಲ. ಈಗ ಪರೀಕ್ಷೆ ನಡೆಸದೇ ತೇರ್ಗಡೆಗೊಳಿಸಿದರೆ ಪರೀಕ್ಷೆ ಬರೆದವರು ಕಡಿಮೆ ಅಂಕ ಬಂದಲ್ಲಿ ವಿರೋಧ ಮಾಡುವುದಿಲ್ಲವೇ ಎಂದರು.

ಸದಸ್ಯರಾದ ಶ್ರೀ. ವಿಷ್ಣುಮೂರ್ತಿಯವರು ಮಾತನಾಡಿ ಅಂತಿಮ ಪದವಿಯವರಿಗೆ ಮಾತ್ರ ಪರೀಕ್ಷೆ ನಡೆಸಿದ್ದು ಉಳಿದವರಿಗೆ ಪರೀಕ್ಷೆ ಮಾಡಿರುವುದಿಲ್ಲ ಎಂದರು

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್..ಇವರು ಮಾತನಾಡಿ 2019-20ನೇ ಸಾಲಿನಲ್ಲಿಯೇ ಪರೀಕ್ಷೆ ಮಾಡಬೇಕಿತ್ತು ಅಥವಾ ಆಗ ಕೋವಿಡ್ ಇದ್ದುದರಿಂದ ಈ ಕ್ರಮ ತೆಗೆದುಕೊಂಡಿದ್ದರೆ ಸರಿ ಇರುತ್ತಿತ್ತು ಎಂದರು. ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಇದಕ್ಕೆ ಧ್ವನಿಗೂಡಿಸಿದರು. ಆದರೆ ಈಗ ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸಿದರೆ ಸುಮ್ಮನೆ ಏಕೆ ರೆಗ್ಯುಲರ್ ಕಾಲೇಜಿಗೆ ಹೋಗಬೇಕು ದೂರಶಿಕ್ಷಣದಲ್ಲಿ ಮಾಡಬಹುದು ಎನ್ನುವ ಭಾವನೆ ವಿದ್ಯಾರ್ಥಿಗಳಿಗೆ ಬರುತ್ತದೆ ಎಂದರು. ಕುವೆಂಪು ವಿಶ್ವವಿದ್ಯಾಲಯಕ್ಕೆ ಒಳ್ಳೆಯ ಹೆಸರು ಇರುತ್ತದೆ, ಹೀಗೆ ಮಾಡಿದಲ್ಲಿ ಹೆಸರು ಹಾಳಾಗುತ್ತದೆ ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್.ರವರು ಮಾತನಾಡಿ ಇದು ಶೈಕ್ಷಣಿಕ ವಿಷಯವಾಗಿದ್ದು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚೆಯಾಗಿ ನಿರ್ಣಯವಾಗಬೇಕಾಗಿರುತ್ತದೆ ಅಲ್ಲಿ ಆದ ಮೇಲೆ ತೀರ್ಮಾನ ಕೈಗೊಳ್ಳಬಹುದು ಎಂದರು. ಇದಕ್ಕೆ ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಧ್ವನಿಗೂಡಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ ಜಿ., ರವರು ಮಾತನಾಡಿ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಆಗಿಲ್ಲ ಈಗ ಈ ಸಭೆಗೆ ಮಂಡಿಸಿರುತ್ತೀರಿ. 1 ರಿಂದ 6ನೇ ಸೆಮಿಸ್ಟರ್‌ನ ಕೆಲವು ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿರುತ್ತೀರಿ ಕೆಲವರಿಗೆ ಆಗಿಲ್ಲ, ರೆಗ್ಯುಲರ್ ಮತ್ತು ದೂರಶಿಕ್ಷಣದ ಯಾವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿದ್ದೀರಿ ಮತ್ತು ಯಾರಿಗೆ ನಡೆಸಿಲ್ಲ ಎಂದು ಮಾಹಿತಿ ಬೇಕು ಎಂದರು. ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ಬಂದರೆ ಅಥವಾ ಅನುತ್ತೀರ್ಣರಾದರೆ ಅವರು ಕೇಳುತ್ತಾರೆ. ದೂರಶಿಕ್ಷಣದಲ್ಲಿ ನಿರಂತರ ಮೌಲ್ಯಮಾಪನ ಇರುವುದಿಲ್ಲ ಹೋಮ್ ಅಸೈನ್‌ಮೆಂಟ್ ಮಾತ್ರ ಇರುತ್ತದೆ. ಈ ಹಿಂದೆ ನಾನು ದೂರವಾಣಿ ಮೂಲಕ ಮಾತನಾಡಿದಾಗ ಈಗಾಗಲೇ ಕೆಲವರಿಗೆ ಪರೀಕ್ಷೆ ಮಾಡಿದ್ದೇವೆ ಉಳಿದವರಿಗೂ ಮಾಡುತ್ತೇವೆ ಎಂಬ ಉತ್ತರ ಕೊಟ್ಟಿದ್ದಿರಿ ಎಂದರು. ರೆಗ್ಯುಲರ್ ವಿದ್ಯಾರ್ಥಿಗಳಿಗೆ ನಿರಂತರ ಮೌಲ್ಯಮಾಪನ / ತರಗತಿ, ಹಾಜರಾತಿ, ಆಂತರಿಕ ಪರೀಕ್ಷೆ, ಸೆಮಿನಾರ್ ಇರುತ್ತದೆ ಆದರೆ ದೂರ ಶಿಕ್ಷಣದವರಿಗೆ ಕೇವಲ ಹೋಮ್ ಅಸೈನ್‌ಮೆಂಟ್ ಮಾತ್ರ ಇರುತ್ತದೆ. ಇವರಿಗೆ ಯಾವ ಹಾಜರಾತಿಯೂ ಇರುವುದಿಲ್ಲ. ಇದನ್ನು ಹೇಗೆ ಪರಿಗಣಿಸುವುದು ಎಂದರು. 2019-20ನೇ ಸಾಲಿನ ರೆಗ್ಯುಲರ್ ಮತ್ತು ದೂರಶಿಕ್ಷಣದ ಯಾವ ಯಾವ ಸೆಮಿಸ್ಟರ್ / ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಿದ್ದೀರಿ ಯಾರಿಗೆ ಮಾಡಿಲ್ಲ ಎಂಬ ವಿವರವಾದ ಪಟ್ಟಿ ಕೊಡಿ ಎಂದರು. ಅದಕ್ಕೆ ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಧ್ವನಿಗೂಡಿಸಿದರು.

ಸಭೆಯ ಮಧ್ಯೆ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಸಭೆಗೆ ಆಹ್ವಾನಿಸಲಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ ಸ್ನಾತಕೋತ್ತರ ಅಧ್ಯಾಪಕರ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಈ ವಿಷಯದ ಕುರಿತು ತಮ್ಮ ಅಭಿಪ್ರಾಯ ನೀಡುವಂತೆ ಕೋರಿದರು.

ಸ್ನಾತಕೋತ್ತರ ಅಧ್ಯಾಪಕರ ಸಂಘದ ಅಧ್ಯಕ್ಷರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್ ರವರು ಮಾತನಾಡಿ, ದೂರಶಿಕ್ಷಣದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೆ ಆಂತರಿಕ

ಅಂಕಗಳ ಆಧಾರದ ಮೇಲೆ ಉತ್ತೀರ್ಣಗೊಳಿಸಬಾರದೆಂಬ ಮನವಿಯನ್ನು ಈಗಾಗಲೇ ಮಾನ್ಯ ಕುಲಪತಿಗಳು, ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ) ರವರಿಗೆ ಸಲ್ಲಿಸಲಾಗಿರುತ್ತದೆ. ದೂರ ಶಿಕ್ಷಣದ ವಿದ್ಯಾರ್ಥಿಗಳು ಹೋಮ್ ಅಸೈನ್ ಮೆಂಟ್‌ಗಳನ್ನು ಮನೆಯಲ್ಲೇ ಕುಳಿತು ಪುಸ್ತಕ ನೋಡಿಕೊಂಡು ಬರೆದಿರುತ್ತಾರೆ. ರೆಗ್ಯುಲರ್ ವಿದ್ಯಾರ್ಥಿಗಳು ತರಗತಿಗೆ ಹಾಜರಾಗುತ್ತಾರೆ /ಹಾಜರಾತಿ /ಆಂತರಿಕ ಪರೀಕ್ಷೆ/ಸೆಮಿನಾರ್ Workshop ಗಳಲ್ಲಿ ಭಾಗವಹಿಸುತ್ತಾರೆ ಇವುಗಳೆಲ್ಲವುಗಳ ಆಧಾರದ ಮೇಲೆ ಆಂತರಿಕ ಅಂಕಗಳನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳು ಅಂಕ ಗಳಿಸಲು ತುಂಬಾ ಕಷ್ಟಪಡುತ್ತಾರೆ.

ದೂರಶಿಕ್ಷಣದವರು ಕಷ್ಟವಿಲ್ಲದೇ ಹೆಚ್ಚು ಅಂಕಪಡೆದು ಕೆಲಸ ಪಡೆಯುತ್ತಾರೆ. ಇದರಿಂದ ರೆಗ್ಯುಲರ್ ಮತ್ತು ದೂರ ಶಿಕ್ಷಣದ ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡಿದಂತಾಗುತ್ತದೆ. ಅಲ್ಲದೇ ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗಿದೆ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮಾತ್ರ ಪ್ರಮೋಟ್ ಮಾಡಲಾಗಿದೆ. ಅಲ್ಲದೇ 2019-20ರಲ್ಲಿ ಪ್ರವೇಶ ಪಡೆದ ದೂರಶಿಕ್ಷಣದ ವಿದ್ಯಾರ್ಥಿಗಳಿಗೆ ಈಗಾಗಲೇ ಪರೀಕ್ಷೆ ವೇಳಾಪಟ್ಟಿ ಪ್ರಕಟಿಸಿ, ಖಾಲಿ ಉತ್ತರ ಪತ್ರಿಕೆಗಳನ್ನೂ ಅಧ್ಯಯನ ಕೇಂದ್ರಗಳಿಗೆ ಕಳಿಸಲಾಗಿದೆ, ಪ್ರಾಯೋಗಿಕ ಪರೀಕ್ಷೆ ಮಾಡಲಾಗಿದೆ. ಆದ್ದರಿಂದ ಈಗ ಸಿದ್ದಾಂತ ಪರೀಕ್ಷೆಗಳನ್ನು ಮಾಡಲು ಮನವಿ ಮಾಡುತ್ತಿದ್ದೇವೆ ಎಂದರು. ಪರೀಕ್ಷೆ ಮಾಡಿ ಫಲಿತಾಂಶ ಪ್ರಕಟಿಸಿದಲ್ಲಿ ಮಾತ್ರ ಫಲಿತಾಂಶಕ್ಕೆ ಮೌಲ್ಯ ಇರುತ್ತದೆ. ನ್ಯಾಕ್ ಹಾಗೂ ಎನ್.ಐ.ಆರ್.ಎಫ್ ಶ್ರೇಣಿ ನೀಡಿಕೆಯಲ್ಲೂ ವಿಶ್ವವಿದ್ಯಾಲಯದ ದೂರ ಶಿಕ್ಷಣದ ಗುಣಮಟ್ಟ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತಂದರು. ಅಲ್ಲದೇ ಯುಜಿಸಿ ನಿಯಮದಂತೆ ಮಾಡಬೇಕು ಹಾಗೂ ವಿದ್ಯಾರ್ಥಿಗಳು ಎಲ್ಲಿ ಪ್ರವೇಶ ಪಡೆದಿರುತ್ತಾರೋ ಅದೇ ಅಧ್ಯಯನ ಕೇಂದ್ರದಲ್ಲಿಯೇ ಪರೀಕ್ಷೆ ಬರೆಯಬೇಕು ಎಂದರು.

ಮುಂದುವರೆದು ಮಾತನಾಡಿ, ಯುಜಿಸಿ ಪೋರ್ಟಲ್‌ನಲ್ಲಿ ದೂರಶಿಕ್ಷಣ ದ್ವಿತೀಯ ಸೈಕಲ್ ಪ್ರವೇಶವು ಫೆಬ್ರವರಿ-2021ಕ್ಕೆ ಕೊನೆಗೊಂಡಿದೆ. ಆದರೆ ಮತ್ತೆ ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಂಡಿರುತ್ತಾರೆ ಈ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗುವ ಸಂಭವವಿದೆ ಈ ಬಗ್ಗೆ ಪರಿಶೀಲಿಸಬೇಕು ಎಂದರು.

ಸ್ನಾತಕೋತ್ತರ ಅಧ್ಯಾಪಕರ ಸಂಘದ ಕಾರ್ಯದರ್ಶಿಯವರಾದ ಪ್ರೊ. ಪ್ರಶಾಂತನಾಯಕ್ ರವರು ಮಾತನಾಡಿ ನನ್ನ ವೃತ್ತಿ ಜೀವನದ 23 ವರ್ಷಗಳ ಅವಧಿಯಲ್ಲಿ ಇದುವರೆಗೂ ನಾವು ಆಡಳಿತದ ನಿರ್ಣಯಗಳ ಬಗ್ಗೆ ಮಾತಾಡಿರಲಿಲ್ಲ. ನಾವು ಅಧ್ಯಾಪಕರು ದೂರ ಶಿಕ್ಷಣದ ಪ್ರಾರಂಭದಿಂದಲೂ ಅದರ ಏಳ್ಗೆಯಲ್ಲಿ ಶ್ರಮಿಸಿರುತ್ತೇವೆ. ಪಠ್ಯ ಸಿದ್ದಪಡಿಸಿರುತ್ತೇವೆ, ಪಾಠ ಮಾಡಿರುತ್ತೇವೆ, ಮೌಲ್ಯಮಾಪನ ಮಾಡುತ್ತೇವೆ. ದೂರಶಿಕ್ಷಣದಲ್ಲಿ ನೀಡುವ ಪದವಿಯೂ ಗುಣಮಟ್ಟದ್ದಾಗಿರಬೇಕಾಗುತ್ತದೆ. ಆದರೆ ಪುಸ್ತಕ ನೋಡಿಕೊಂಡು ಬರೆದಿರುವ ಹೋಮ್ ಅಸೈನ್‌ಮೆಂಟ್ ಆಧಾರದ ಮೇಲೆ, ಹಾಗೂ ಬೇರೆ ಯಾವುದೇ ಮಾನದಂಡಗಳಿಲ್ಲದೆ ದೂರಶಿಕ್ಷಣದ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸುವುದರ ಕುರಿತು ನಮ್ಮ ವಿರೋಧವಿದೆ. ಎಂಬಿಎ /ಎಂ.ಲಿಬ್ / ಬಿ.ಲಿಬ್ ಪರೀಕ್ಷೆ ಮಾಡುವಾಗ ಬಾರದ ಕೊರೋನಾ 2019-20ನೇ ಸಾಲಿನ ಪ್ರಥಮ / ದ್ವಿತೀಯ ವರ್ಷದ ಸ್ನಾತಕ ಹಾಗೂ ಪ್ರಥಮ ವರ್ಷದ ಸ್ನಾತಕೋತ್ತರ ಪದವಿ ಪರೀಕ್ಷೆ ಮಾಡಲು ಬರುತ್ತದೆಯೆ ಎಂದರು. ಅಲ್ಲದೆ ಕುವೆಂಪು ವಿಶ್ವವಿದ್ಯಾಲಯದ ಘನತೆಯೇ ಬೇರೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕತೆಯೇ ಬೇರೆ ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ಎಂದರು. ನೀವು ಪರೀಕ್ಷೆ ಮಾಡಿ, ನಾವು ಅಧ್ಯಾಪಕರು ನಿಮಗೆ ಎಲ್ಲಾ ತರಹದ ಸಹಕಾರ ಕೊಡುತ್ತೇವೆ ಆದಷ್ಟು ಬೇಗ ಮೌಲ್ಯಮಾಪನ ಮಾಡಿಕೊಡುತ್ತೇವೆ ಎಂದು ಹೇಳಿದರು. ಕೊನೆಯಲ್ಲಿ ತಮ್ಮ ಅಭಿಪ್ರಾಯ ತಿಳಿಸಲು ಅವಕಾಶ ಕೊಟ್ಟಿರುವುದಕ್ಕೆ ಸಭೆಗೆ ಧನ್ಯವಾದ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡುತ್ತಾ, ದೂರ ಶಿಕ್ಷಣದ ನಿರ್ದೇಶಕರು ಈ ಪರೀಕ್ಷೆ ನಡೆಸಬೇಕೇ

ಅಥವಾ ಫಲಿತಾಂಶ ಪ್ರಕಟಿಸಬೇಕೇ ಎಂಬುದರ ಸಾಧಕ ಬಾಧಕಗಳನ್ನು ಸಭೆಗೆ ವಿವರಿಸುವಂತೆ ತಿಳಿಸಿದರು. ಹಾಗೂ ವಿದ್ಯಾರ್ಥಿಗಳು ಯಾವ ರೀತಿಯ ಆತಂಕವನ್ನು ವ್ಯಕ್ತಪಡಿಸುತಿದ್ದಾರೆ ಎಂಬುದನ್ನು ಯುಜಿಸಿ ನಿಯಮಗಳನ್ನು ಉಲ್ಲೇಖಿಸಿ ವಿವರಿಸುವಂತೆ ಸೂಚಿಸಿದರು.

ದೂರಶಿಕ್ಷಣದ ನಿರ್ದೇಶಕರಾದ ಪ್ರೊ. ಎಸ್.ಎನ್. ಯೋಗೀಶ್‌ರವರು ಮಾತನಾಡಿ ದೂರಶಿಕ್ಷಣದಡಿ 17000 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಬೇಕಾಗಿರುತ್ತದೆ. ದೂರ ಶಿಕ್ಷಣದಲ್ಲಿ ಪ್ರವೇಶ ಪಡೆದ ಅನೇಕ ವಿದ್ಯಾರ್ಥಿಗಳು ಪ್ರತಿದಿನ ದೂರವಾಣಿ ಕರೆ ಮಾಡಿ ಈ ಹಿಂದೆ ತೆರೆದ ಪುಸ್ತಕ ಪರೀಕ್ಷೆ ಮಾಡಿ ಪ್ರಮೋಟ್ ಮಾಡುವುದಾಗಿ ವಿಶ್ವವಿದ್ಯಾಲಯದ ವೆಬ್-ಸೈಟ್‌ನಲ್ಲಿ ಪ್ರಕಟಿಸಿ ನಂತರ ಅದನ್ನು ಹಿಂಪಡೆದು ಇದುವರೆಗೂ ಫಲಿತಾಂಶ ಪ್ರಕಟಿಸುವ ಕುರಿತು ಯಾವುದೇ ನಿರ್ಧಾರ ಕೈಗೊಂಡಿರುವುದಿಲ್ಲ. ಈಗಾಗಲೇ ಸಾಕಷ್ಟು ವಿಳಂಭವಾಗಿರುವುದರಿಂದ ಭವಿಷ್ಯದ ದೃಷ್ಟಿಯಿಂದ ನಾವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಪುನ: ಪ್ರವೇಶ ಪಡೆಯುವುದಾಗಿ ಹೇಳುತಿದ್ದಾರೆ. ಈ ಬಗ್ಗೆ ತುರ್ತು ಕ್ರಮಕೈಗೊಳ್ಳಬೇಕು ಎಂದರು. ಅಲ್ಲದೆ ಈಗಾಗಲೇ ಫಲಿತಾಂಶ ಕೊಟ್ಟಿದ್ದರೆ ಸದರಿ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಪ್ರವೇಶ ಶುಲ್ಕ ಪಾವತಿಸುವುದರಿಂದ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿ ಉತ್ತಮವಾಗುತಿತ್ತು ಎಂದರು. ಆದ್ದರಿಂದ ವಿದ್ಯಾರ್ಥಿಗಳ ಫಲಿತಾಂಶವನ್ನು ಯುಜಿಸಿ ಹೊರಡಿಸಿರುವ ಮಾರ್ಗಸೂಚಿ ಹಾಗೂ ರಾಜ್ಯ ಸರ್ಕಾರದ ಆದೇಶದ ಪ್ರಕಾರ ಪ್ರಕಟಿಸಲು ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆದಷ್ಟು ಬೇಗ ಪ್ರಮೋಟ್ ಮಾಡುವ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳುವುದು ಸೂಕ್ತ ಎಂದರು.

ಸದಸ್ಯರಾದ ಶ್ರೀ ರಮೇಶ್‌ಬಾಬುರವರು ಮಾತನಾಡುತ್ತಾ, ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಿದರೂ ನಂತರ ಪ್ರವೇಶ ಶುಲ್ಕವನ್ನು ಪಾವತಿಸುವುದರಿಂದ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ದೂರ ಶಿಕ್ಷಣದ ಪರೀಕ್ಷೆಗಳು ಹೇಗೆ ನಡೆಯುತ್ತವೆ ಎಂಬುದರ ಬಗ್ಗೆ ದೂರ ಶಿಕ್ಷಣದ ಕೆಲವು ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸಿರುವ ನಮಗೆ ಹಾಗೂ ಶ್ರೀ ಸಂತೋಷ್ ಬಳ್ಳೇಕೆರೆಯವರಿಗೆ ಮಾಹಿತಿ ಇದೆ ಎಂದರು.

ಆನ್-ಲೈನ್ ಮುಖಾಂತರ ಸಭೆಯಲ್ಲಿ ಭಾಗವಹಿಸಿದ ಸದಸ್ಯರಾದ ಶ್ರೀ ಎನ್.ಆರ್ ಮಂಜುನಾಥ್‌ರವರು ಮಾತನಾಡಿ ನಿರ್ದೇಶಕರು ಆರು ತಿಂಗಳ ಅವಧಿಯಲ್ಲಿ ಪರೀಕ್ಷೆ ನಡೆಸುವ ಬಗ್ಗೆ ಏಕೆ ಕ್ರಮ ಕೈಗೊಂಡಿಲ್ಲ, ಹತ್ತನೇ ತರಗತಿಯ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗಿದೆ. ಆದರೆ ಸಾವಿರಾರು ವಿದ್ಯಾರ್ಥಿಗಳಿರುವ ನಿಮಗೆ ಏಕೆ ಆಗುತ್ತಿಲ್ಲ ಎಂದರು. ಇದಕ್ಕೆ ಉತ್ತರಿಸಿದ ನಿರ್ದೇಶಕರು ಈ ಬಗ್ಗೆ ಪರೀಕ್ಷಾ ವಿಭಾಗಕ್ಕೆ ಹಲವಾರು ಬಾರಿ ಪತ್ರ ಬರೆಯಲಾಗಿದೆ ಎಂದರು.

ಕುಲಸಚಿವರು ಮಾತನಾಡುತ್ತಾ ಪರೀಕ್ಷೆಯನ್ನು ಯಾವ ರೀತಿ ಮಾಡಬೇಕು ಎಂಬುದರ ಕುರಿತು ಯುಜಿಸಿ ಮಾರ್ಗಸೂಚಿಯನ್ನು ಸಭೆಗೆ ವಿವರಿಸಿ ಅದರ ಆಧಾರದ ಮೇಲೆ ಪರೀಕ್ಷೆಯನ್ನು ನಡೆಸಲು ಅನುಸರಿಸಬೇಕಾದ ಕ್ರಮವನ್ನು ನಿರ್ಧರಿಸಬಹುದು ಎಂದರು.

ಸದಸ್ಯರಾದ ಶ್ರೀ ಎನ್.ಆರ್ ಮಂಜುನಾಥ್‌ರವರು ಪರೀಕ್ಷೆಯನ್ನು ಸರಿಯಾಗೇ ಮಾಡಬೇಕು, ಇಲ್ಲದಿದ್ದಲಿ ಶಿಕ್ಷಣದ ಗುಣಮಟ್ಟ ಕಡಿಮೆಯಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಅಶೋಕ್ ಡಿ ರೇವಣಕರ್‌ರವರು ಮಾತನಾಡಿ, ಎಲ್ಲಾ ಸದಸ್ಯರುಗಳ ಅಭಿಪ್ರಾಯವೂ ಪರೀಕ್ಷೆ ನಡೆಸುವುದೇ ಸೂಕ್ತ ಎಂದಿರುವುದರಿಂದ ವಿಶ್ವವಿದ್ಯಾಲಯದ ಘನತೆಯ ದೃಷ್ಟಿಯಿಂದ ಪರೀಕ್ಷೆ ನಡೆಸಿಯೇ ಫಲಿತಾಂಶ ಪ್ರಕಟಿಸಬಹುದು ಎಂದರು.

ಸದಸ್ಯರಾದ ಪ್ರೊ ವಿ. ಕೃಷ್ಣರವರು ಮಾತನಾಡಿ ಪರೀಕ್ಷೆ ನಡೆಸುವುದು ಸೂಕ್ತ ನಾವು

ಅಧ್ಯಾಪಕರು ಈ ಹಿಂದೆಯೂ ಸಹಕಾರ ಕೊಟ್ಟಿದ್ದೇವೆ ಮುಂದೆಯೂ ಸಹಕಾರ ಕೊಡುತ್ತೇವೆ ವಿಶ್ವವಿದ್ಯಾಲಯ ಈ ಮಟ್ಟಕ್ಕೆ ಬರಬೇಕಾದರೆ ಅಧ್ಯಾಪಕರ ಶ್ರಮವೂ ಇದೆ ದಯಮಾಡಿ ಪರೀಕ್ಷೆ ಮಾಡಿ ಎಂದರು.

ಸದಸ್ಯರಾದ ಶ್ರೀ ಎಸ್.ಆರ್. ನಾಗರಾಜ್‌ರವರು ಮಾತನಾಡಿ ಎಲ್ಲರ ಅಭಿಪ್ರಾಯದಂತೆ ಪರೀಕ್ಷೆ ನಡೆಸಿಯೇ ಫಲಿತಾಂಶ ಪ್ರಕಟಿಸುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ ಎಂದರು.

ಸದಸ್ಯರಾದ ಶ್ರೀ ಯುವರಾಜ್ ಬಿ.ಹೆಚ್., ಶ್ರೀಮತಿ ರಾಜೇಶ್ವರಿಯವರು, ಮತ್ತು ಶ್ರೀ ವಿಷ್ಣುಮೂರ್ತಿಯವರೂ ಕೂಡ ಪರೀಕ್ಷೆ ಮಾಡುವುದೇ ಸೂಕ್ತ ಎಂದರು.

ಸದಸ್ಯರಾದ ಶ್ರೀ ನಿರಂಜನಮೂರ್ತಿಯವರು ಮಾತನಾಡಿ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಪರೀಕ್ಷೆ ಮಾಡುವುದೇ ಸೂಕ್ತ ಎಂದರು. ಅಲ್ಲದೆ ಮುಂದಿನ ದಿನಗಳಲ್ಲಿ ನಾವೂ ಕೂಡ ಸಭೆಗೆ ಹಾಜರಾಗಲು ಅವಕಾಶವಾಗುವಂತೆ 2 ದಿನಗಳ ಕಾಲಾವಕಾಶ ಕೊಟ್ಟು ಸಭೆಗಳನ್ನು ನಿಗದಿಪಡಿಸಬೇಕೆಂದು ಕೋರಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಪರೀಕ್ಷೆ ಮಾಡಿದಲ್ಲಿ ಮುಂದೆ ದೂರಶಿಕ್ಷಣದ ವಿದ್ಯಾರ್ಥಿಗಳು ಮುಷ್ಕರ ಮಾಡಬಹುದು ಅಥವಾ ನ್ಯಾಯಾಲಯದ ಮೊರೆ ಹೋಗಬಹುದು ಅದನ್ನು ಎದುರಿಸಲು ಸಿದ್ಧರಿರಬೇಕಾಗುತ್ತದೆ. ವಿರೋಧ ಮಾಡಿದರೆ ಏನು ಮಾಡುವುದು. ದೂರ ಶಿಕ್ಷಣ ವಿದ್ಯಾರ್ಥಿಗಳು ಕೂಡ ನಮ್ಮ ವಿದ್ಯಾರ್ಥಿಗಳೇ, ಅವರ ಗೋಳು ಕೇಳಲಾಗುತ್ತಿಲ್ಲ. ಮುಂದೆ ಕಷ್ಟವಾಗಬಹುದು. ಆದ್ದರಿಂದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸರ್ಕಾರದ ಗಮನಕ್ಕೆ ತಂದು ಸರ್ಕಾರದಿಂದ ಅಭಿಪ್ರಾಯ ಪಡೆದು ಮುಂದುವರೆಯುವುದು ಸೂಕ್ತ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ವಿಷಯವು ವಿದ್ಯಾವಿಷಯಕ ಪರಿಷತ್‌ನಲ್ಲೂ ಆಗಬೇಕಿತ್ತು ಆ ಸಭೆ ಕರೆಯೋಣ ಎಂದರು, ಇದಕ್ಕೆ ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಹಾಗೂ ಇತರೆ ಸದಸ್ಯರುಗಳು ವಿರೋಧ ವ್ಯಕ್ತಪಡಿಸಿದರು. ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ನಿರ್ಣಯ ಆದ ಮೇಲೆ ಸಿಂಡಿಕೇಟ್ ಸಭೆಗೆ ಮಂಡಿಸಬೇಕು. ಈಗ ಸಿಂಡಿಕೇಟ್ ನಿರ್ಣಯ ಆಗಿರುವುದರಿಂದ ಮತ್ತೆ ವಿದ್ಯಾವಿಷಯಕ ಪರಿಷತ್ ನಲ್ಲಿ ಮಂಡಿಸುವುದು ಸರಿಯಾದ ಕ್ರಮವಲ್ಲ ಎಂದರು. ಅದಕ್ಕೆ ಸದಸ್ಯರಾದ ಶ್ರೀ ರಮೇಶ್‌ಬಾಬುರವರು ಮಾತನಾಡಿ ಟೆಕ್ನಿಕಲ್ ತೊಂದರೆಯಾಗುವುದಾದರೆ ವಿದ್ಯಾವಿಷಯಕ ಪರಿಷತ್ ಸಭೆಗೆ ಮಂಡಿಸಿ ಎಂದರು. ಶ್ರೀ ಧರ್ಮಪ್ರಸಾದ್‌ರವರು ಕೂಡ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿಯೂ ಅನುಮೋದನೆಯಾಗುವುದು ಅನಿವಾರ್ಯವಾಗಿದ್ದರೆ ಮಂಡಿಸಿ ಎಂದರು. ಇದಕ್ಕೆ ಪುನ: ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್., ಇವರು ವಿರೋಧಿಸಿದರು.

ಸದಸ್ಯರಾದ ಶ್ರೀ ರಮೇಶಬಾಬುರವರು ಮಾತನಾಡಿ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಯುಜಿಸಿ ನಿರ್ಣಯ ಹಾಗೂ ಸರ್ಕಾರದ ಆದೇಶಗಳನ್ವಯ ಸಾಧಕ /ಭಾದಕ ನೋಡಿ ಕ್ರಮಕೈಗೊಳ್ಳುವ ಕುರಿತು ಚರ್ಚೆಯಾಗಿರುವುದರಿಂದ ಈಗ ತೆಗೆದುಕೊಂಡಿರುವ ನಿರ್ಣಯ ಸರಿಯಾಗಿದೆ ಎಂದರು. ಇದಕ್ಕೆ ಇತರ ಸದಸ್ಯರು ಧ್ವನಿಗೂಡಿಸಿದರು.

ಸದಸ್ಯರಾದ ಡಾ. ಅಶೋಕ್ ಡಿ ರೇವಣಕರ್ ರವರು ಮಾತನಾಡಿ ಟೆಕ್ನಿಕಲ್ ತೊಂದರೆಯಾಗುವುದಾದರೆ ವಿದ್ಯಾವಿಷಯಕ ಪರಿಷತ್ ಸಭೆಯನ್ನು ಎರಡು ದಿನದಲ್ಲಿ ಕರೆಯಿರಿ ಎಂದರು.

ಕುಲಸಚಿವರು ಮಾತನಾಡಿ ನಮಗೆ ವಿದ್ಯಾವಿಷಯಕ ಪರಿಷತ್ ಸಭೆ ಆದ ಮೇಲೆ ಸಿಂಡಿಕೇಟ್ ಸಭೆ ಕರೆಯಬೇಕು ಎಂದಿತ್ತು. ಆದರೆ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಎರಡು ಬಾರಿ ಈ ವಿಷಯದ ಮೇಲೆ ಚರ್ಚೆಯಾಗಿದ್ದು ಹೆಚ್ಚಿನ ಸದಸ್ಯರು ಪರೀಕ್ಷೆ ಮಾಡಲು

ಆಗ್ರಹಿಸಿರುವುದರಿಂದ ಹಾಗೂ ಚರ್ಚೆಯ ಕುರಿತು ಯಾವುದೇ ನಿರ್ಣಯಕ್ಕೆ ಬಾರದೇ ಇರುವುದರಿಂದ ಕುಲಸಚಿವರು(ಪರೀಕ್ಷಾಂಗ), ನಿರ್ದೇಶಕರು ದೂರಶಿಕ್ಷಣ ನಿರ್ದೇಶನಾಲಯ ಹಾಗೂ ಕೆಲವು ಸಿಂಡಿಕೇಟ್ ಸದಸ್ಯರ ಕೋರಿಕೆಯಂತೆ ಸಿಂಡಿಕೇಟಿಗೆ ಮಂಡಿಸಲಾಗಿದೆ ಎಂದರು..

ಪುನ: ಶ್ರೀ ಧರ್ಮಪ್ರಸಾದ್‌ರವರು ಮಾತನಾಡುತ್ತಾ, ಈಗಾಗಲೇ 2 ಬಾರಿ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚೆಯಾಗಿದ್ದು, ವಿದ್ಯಾವಿಷಯಕ ಪರಿಷತ್‌ನ ಎಲ್ಲಾ ಸದಸ್ಯರುಗಳು ಸಹ ಪರೀಕ್ಷೆ ನಡೆಸಲು ಆಗ್ರಹಿಸಿರುವುದರಿಂದ ಸಿಂಡಿಕೇಟ್ ತೀರ್ಮಾನವಾಗಿ ತೆಗೆದುಕೊಳ್ಳುವುದು ಸೂಕ್ತ, ಆದರೆ ಮುಂದೆ ಹೀಗೆ ಮಾಡಬೇಡಿ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅಲ್ಲಿ ನಿರ್ಣಯವಾದ ಬಳಿಕ ಸಿಂಡಿಕೇಟ್ ಸಭೆಗೆ ಮಂಡಿಸಿ ಎಂದರು

ಪರೀಕ್ಷೆ ನಡೆಸಲು ಸದ್ಯ ಏನೂ ತೊಂದರೆಯಿಲ್ಲ. ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ ಕಲ್ಪಿಸಬೇಕಾಗುತ್ತದೆ. ಈ ಒಂದು ಬಾರಿ ಪೂರ್ಣ ಕ್ಯಾರಿ ಓವರ್ ಸಿಸ್ಟಮ್ ಕೊಟ್ಟು ಶೀಘ್ರವಾಗಿ ಪರೀಕ್ಷೆ ಮಾಡೋಣ ಎಂದರು. ಒಟ್ಟಿನಲ್ಲಿ ಆದಷ್ಟು ಬೇಗ ಪರೀಕ್ಷೆ ನಡೆಸುವುದು ಸೂಕ್ತವೆಂದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

ನಿರ್ಣಯ : ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿನಲ್ಲಿ 2 ಬಾರಿ ದೂರ ಶಿಕ್ಷಣದ 2019-20ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸುವ ವಿಷಯದ ಕುರಿತು ಚರ್ಚೆಯಾಗಿತ್ತು. ಆದರೆ ಯಾವುದೇ ನಿರ್ಣಯ ಆಗಿರಲಿಲ್ಲ ಆದರೆ ಸದರಿ ಚರ್ಚೆಯಲ್ಲಿ ಪರೀಕ್ಷೆ ನಡೆಸುವುದರ ಕುರಿತಂತೆ ಪೂರಕ ಅಂಶಗಳು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆದಷ್ಟು ಬೇಗ ಈ ಕುರಿತು ನಿರ್ಣಯ ತೆಗೆದುಕೊಳ್ಳುವುದು ಅನಿವಾರ್ಯವಾಗಿದ್ದರಿಂದ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯದ ಕುರಿತು ಸಮಗ್ರವಾಗಿ ಚರ್ಚಿಸಿ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (ಪ್ರಥಮ ಮತ್ತು ದ್ವಿತೀಯ ಆವೃತ್ತಿ) ವಿದ್ಯಾರ್ಥಿಗಳಿಗೆ ಶೀಘ್ರವಾಗಿ ಪರೀಕ್ಷೆ ನಡೆಸಿಯೇ ಫಲಿತಾಂಶ ಪ್ರಕಟಿಸಲು ತೀರ್ಮಾನಿಸಿ, ಪರೀಕ್ಷಾ ಅಧಿಸೂಚನೆ ಹೊರಡಿಸಲು ಕ್ರಮಕೈಗೊಳ್ಳುವಂತೆ ಕುಲಸಚಿವ (ಪರೀಕ್ಷಾಂಗ) ರವರಿಗೆ ತಿಳಿಸಲಾಯಿತು. ಹಾಗೂ ಪರೀಕ್ಷೆ ನಡೆಸಲು ಪೂರಕ ವಾತಾವರಣ ಕಲ್ಪಿಸುವಂತೆ ಹಾಗೂ ಈ ಒಂದು ಬಾರಿ ಮಾತ್ರ ಪೂರ್ಣಕ್ಯಾರಿ ಓವರ್ ನೀಡಲು ನಿರ್ಣಯಿಸಲಾಯಿತು.

2021-ಸಿಂ-ವಿ-1.02: <u>ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:</u>

- ಯಾವುದೂ ಇರುವುದಿಲ್ಲ -

2021-ಸಿಂ-ವಿ-1.03: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ :

- ಯಾವುದೂ ಇರುವುದಿಲ್ಲ -

2021-ಸಿಂ-ವಿ-1.03: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :

1) 2021-22ನೇ ಸಾಲಿನ ಸ್ನಾತಕೋತ್ತರ ಪ್ರವೇಶಕ್ಕೆ ಅಧಿಸೂಚನೆ ಹೊರಡಿಸುವ ಕುರಿತು ಹಾಗೂ M.Sc Food Technology, Nanotechnology, M.Sc. Seed Technology ಇತ್ಯಾದಿ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಕುರಿತು.

ಕುಲಸಚಿವರು ಮಾತನಾಡಿ 2021-22ನೇ ಸಾಲಿನ ಸ್ನಾತಕೋತ್ತರ ಪದವಿಯ ಪ್ರವೇಶಕ್ಕೆ ಅಧಿಸೂಚನೆ ಹೊರಡಿಸಬೇಕಾಗಿದ್ದು, ಈಗಾಗಲೇ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅಧಿಸೂಚನೆ ಹೊರಡಿಸಿ ಪ್ರವೇಶ ಪ್ರಕ್ರಿಯೆ ಮುಗಿಯುವ ಹಂತದಲ್ಲಿದೆ. (ಉದಾ: ತುಮಕೂರು, ಮಂಗಳೂರು. ಮೈಸೂರು ಇತ್ಯಾದಿ) ನಮ್ಮ ವಿಶ್ವವಿದ್ಯಾಲಯದಲ್ಲಿ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕೋವಿಡ್-19 ಕಾರಣದಿಂದಾಗಿ ಆನ್-ಲೈನ್ ಪ್ರವೇಶಕ್ಕೆ ಒಪ್ಪಂದ(ಎಂ.ಒ.ಯು)

ಮಾಡಿಕೊಳ್ಳಲಾಗಿತ್ತು. ಆದರೆ ಸದರಿ ತಂತ್ರಾಂಶದಲ್ಲಿ ಅನೇಕ ನ್ಯೂನತೆಗಳು ಕಂಡು ಬಂದಿದ್ದು ಪೂರ್ಣ ಪ್ರಮಾಣದಲ್ಲಿ ಯಶಸ್ಸು ಆಗಿರುವುದಿಲ್ಲ. ಆನ್ ಲೈನ್ ಅರ್ಜಿಗಳನ್ನು ತೆಗೆದುಕೊಂಡರೂ ಕೂಡ ಮತ್ತೆ ಅವುಗಳನ್ನು ವಿಭಾಗದಲ್ಲಿ ಡೌನ್ಲೋಡ್ ಮಾಡಿಕೊಂಡು ಮ್ಯಾನ್ಯುಯಲ್ ಆಗಿ ಪರಿಶೀಲಿಸಿ ತಿದ್ದುಪಡಿ ಮಾಡಬೇಕಾಯಿತು. ಪುನ: ಆಫ್ ಲೈನ್ ಮಾಡಬೇಕಾಯಿತು. ಈ ಹಿನ್ನೆಲೆಯಲ್ಲಿ ದಿನಾಂಕ:17-11-2021 ರಂದು ನಡೆದ ಎಲ್ಲಾ ನಿಕಾಯದ ಡೀನರುಗಳು ಹಾಗೂ ಹಿರಿಯ ಪ್ರಾಧ್ಯಾಪಕರುಗಳ ಸಭೆಯಲ್ಲಿ ಸಾಕಷ್ಟು ಚರ್ಚೆಯ ನಂತರ ಈಗಾಗಲೇ ತುಂಬಾ ವಿಳಂಭ ಆಗಿರುವುದರಿಂದ ಈ ಬಾರಿ ಆಫ್-ಲೈನ್‌ನಲ್ಲಿಯೇ ಪ್ರವೇಶ ಪ್ರಕ್ರಿಯೆ ನಡೆಸಲು ನಿರ್ಣಯಿಸಲಾಯಿತು. ಆನ್-ಲೈನ್ ಪ್ರವೇಶಾತಿಗೆ ಸಾಕಷ್ಟು ಪೂರ್ವ ಸಿದ್ದತೆ ಬೇಕಾಗಿರುವುದರಿಂದ ಸದ್ಯಕ್ಕೆ ಆಫ ಲೈನ್ ಮಾಡಿ ಮುಂದಿನ ವರ್ಷಕ್ಕೆ ಬೇಕಾದರೆ ಆನ್ ಲೈನ್ ಪ್ರವೇಶ ಮಾಡಬಹುದು ಎಂದರು.

ಸದಸ್ಯರಾದ ಪ್ರೊ. ವಿ. ಕೃಷ್ಣರವರು ಮಾತನಾಡಿ ಈ ಸಾಫ್ಟ್‌ವೇರ್ ಪೂರ್ಣ ಪ್ರಮಾಣದಲ್ಲಿ ಉಪಯೋಗ ಆಗಲಿಲ್ಲ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಇನ್ನೊಮ್ಮೆ ಆಫ್ ಲೈನ್ ನಲ್ಲಿ ಅರ್ಜಿ ಸಲ್ಲಿಸುವಂತೆ ತಿಳಿಸಿದ ಪ್ರಸಂಗಗಳೂ ನಡೆದಿದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈ ಬಾರಿಯೂ ಅಳವಡಿಸಿಕೊಂಡರೆ ಇದರಿಂದ ಪ್ರವೇಶ

ಪ್ರಕ್ರಿಯೆ ಇನ್ನೂ ಕ್ಲಿಷ್ಟಕರವಾಗುತ್ತದೆ ಹಾಗೂ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಆಫ್-ಲೈನ್ ಪ್ರವೇಶಕ್ಕೆ ಅನುವು ಮಾಡಿಕೊಡಬೇಕು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಕೋವಿಡ್-19 ಸಮಯದಲ್ಲಿ ಆನ್ ಲೈನ್ ಪ್ರವೇಶದ ತಂತ್ರಾಂಶ ಖರೀದಿಸಿ ಕಂಪನಿಯ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈಗ ಏಕಾ ಏಕಿ ಸಾಫ್ಟ್ ವೇರ್ ಬೇಡ ಎಂದು ತಿರಸ್ಕಾರ ಮಾಡಬಾರದು.

ಕುಲಸಚಿವರು ಮಾತನಾಡಿ ಒಪ್ಪಂದ ಬೇಡ ಎಂಬ ತಿರಸ್ಕಾರವಲ್ಲ, ಈಗಾಗಲೇ ವಿಳಂಬವಾಗಿರುವುದರಿಂದ ಈ ವರ್ಷಕ್ಕೆ ಬೇಡ ಅಷ್ಟೆ, ಅಧಿಸೂಚನೆ ಹೊರಡಿಸುವುದು ಇನ್ನೂ ವಿಳಂಭವಾದರೆ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾಲಯ ಬಿಟ್ಟು ಬೇರೆ ವಿಶ್ವವಿದ್ಯಾಲಯಗಳಿಗೆ ಹೋಗಬಹುದು. ಆಗ ನಮ್ಮ ವಿಶ್ವವಿದ್ಯಾಲಯಕ್ಕೆ ಪ್ರವೇಶ ಕಡಿಮೆಯಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಪುನ: ಮಾತನಾಡುತ್ತಾ ಸಂಕಷ್ಟದ ಸಮಯದಲ್ಲಿ ನಮಗೆ ತುರ್ತಾಗಿ ಸೇವೆ ಒದಗಿಸಿದ್ದಾರೆ. ಈಗಾಗಲೇ ಒಪ್ಪಂದ ಮಾಡಿಕೊಳ್ಳಲಾಗಿದೆ ಅದರ ಅವಧಿ ಇನ್ನೂ ಇದೆ ಅದನ್ನು ಮುಂದುವರೆಸಬೇಕು. ಈಗ ಅವರಿಗೆ ಹಣ ಸಂದಾಯ ಕೂಡ ಮಾಡಬೇಕು ಎಂದರು. ಈಗ ಬೇಡ ಎಂದರೆ ಅವರು ಈ ಸಂಬಂಧ ನ್ಯಾಯಾಲಯಕ್ಕೆ ಹೋಗುವ ಸಂಭವವಿದೆ ಎಂದರು.

ಸದಸ್ಯರಾದ ಶ್ರೀ ರಮೇಶಬಾಬುರವರು ಮಾತನಾಡಿ ಎಷ್ಟು ತಂತ್ರಾಂಶವನ್ನು ಉಪಯೋಗಿಸಿಕೊಳ್ಳಲಾಗಿದೆ ಅಷ್ಟು ಹಣ ಪಾವತಿ ಮಾಡಿ ಎಂದರು. ತಾಂತ್ರಿಕ ತೊಂದರೆಯಿರುವುದರಿಂದ ಮುಂದುವರೆಸೋಕೆ ಆಗ್ತಾ ಇಲ್ಲ ಎಂದರು.

ಕುಲಸಚಿವರು ಮಾತನಾಡಿ ಈಗಾಗಲೇ ಪದವಿ ಫಲಿತಾಂಶ ಹೊರಬಿದ್ದಿರುವುದರಿಂದ ನನಗೆ ಸಾರ್ವಜನಿಕರಿಂದ ಪ್ರತಿ ದಿನ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಇನ್ನೂ ಅಧಿಸೂಚನೆ ಹೊರಡಿಸಿರುವುದಿಲ್ಲ ಎಂದು ಕರೆ ಬರುತ್ತಿವೆ ಎಂದರು.

ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆ ಕೋವಿಡ್- 19 ರ ತುರ್ತು ಎಂದು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಈಗ ವಿಶ್ವವಿದ್ಯಾಲಯವೇ ಆರ್ಥಿಕ ಸಂಕಷ್ಟದಲ್ಲಿ ಇರುವುದರಿಂದ ಸದರಿ ಒಪ್ಪಂದವನ್ನು ಕೈ ಬಿಡಬಹುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

ಕುಲಸಚಿವರು ಮಾತನಾಡಿ M.Sc Food Technology, Nanotechnology, M.Sc. Seed Technology ಇತ್ಯಾದಿ ಹೊಸ ಕೋರ್ಸುಗಳನ್ನು ಪ್ರಾರಂಭಿಸಬೇಕೆಂಬ ಪ್ರಸ್ತಾವನೆಯಿದೆ. ಆದರೆ ಹೊಸ್ಸ ಕೋರ್ಸುಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಈ ಕೋರ್ಸುಗಳ ಪಠ್ಯಕ್ರಮಗಳು ಅಧ್ಯಯನ ಮಂಡಳಿ ಹಾಗೂ ನಿಕಾಯಗಳಲ್ಲಿ

ಅನುಮೋದನೆಯಾಗಬೇಕಾಗಿರುತ್ತದೆ. ಅಲ್ಲದೇ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಪ್ರಕರಣ 40(ಎಫ್) ಪ್ರಕಾರ ಯಾವುದೇ ಅಧ್ಯಯನ ವಿಭಾಗವನ್ನು ಪ್ರಾರಂಭಿಸಬೇಕಾದಲ್ಲಿ ಪರಿನಿಯಮದ ಮೂಲಕವೇ ಪ್ರಾರಂಭಿಸಬೇಕಾಗುತ್ತದೆ. ಪರಿನಿಯಮಗಳನ್ನು ರಚಿಸಿ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗೆ ಸಲ್ಲಿಸಬೇಕಾಗುತ್ತದೆ. ಎಂದರು. ಕುಲಾಧಿಪತಿಗಳ ಅನುಮೋದನೆಯಾಗದ ಹೊರತು ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಅವಕಾಶವಿರುವುದಿಲ್ಲ. ಅಲ್ಲದೇ ಈಗಾಗಲೇ ಪರಿನಿಯಮವಿಲ್ಲದೇ ಕೆಲವು ವಿಭಾಗಗಳನ್ನು ಪ್ರಾರಂಭಿಸಿ ನಂತರ ಪರಿನಿಯಮವನ್ನು ರಚಿಸಿ ಕುಲಾಧಿಪತಿಗಳ ಅನುಮೋದನೆ ದೊರಕಿಸಿಕೊಡಲು ಸರ್ಕಾರಕ್ಕೆ ಸಲ್ಲಿಸಲಾದ ಪರಿನಿಯಮಗಳು ಸರ್ಕಾರದಿಂದ ಕೋವಿಡ್-19 ಕಾರಣದಿಂದಾಗಿ 2022ರ ನಂತರ ಅನುಮೋದನೆಗಾಗಿ ಸಲ್ಲಿಸುವಂತೆ ತಿಳಿಸಿ ಹಿಂತಿರುಗಿಸಿರುತ್ತಾರೆ.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 40(ಎಫ್) ಪ್ರಕಾರ ಯಾವುದೇ ಅಧ್ಯಯನ ವಿಭಾಗವನ್ನು ಪ್ರಾರಂಭಿಸಬೇಕಾದಲ್ಲಿ ಪರಿನಿಯಮದ ಮೂಲಕವೇ ಪ್ರಾರಂಭಿಸಬೇಕಾಗುತ್ತದೆ. ಎನ್ನುತಿದ್ದೀರಿ. 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶ ಪ್ರಕ್ರಿಯೆ ತುರ್ತಾಗಿ ಆಗಬೇಕಾಗಿರುತ್ತದೆ. ಹೊಸ ಕೋರ್ಸುಗಳಿಗೆ ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳು ಆಗಬೇಕಾಗಿರುವುದರಿಂದ ನಂತರ ಅಧಿಸೂಚನೆ ಹೊರಡಿಸಬಹುದು ಎಂದರು.

ಮಾನ್ಯಕುಲಪತಿಗಳು ಮೇಲ್ಕಂಡ ಎಲ್ಲಾ ಹೊಸ ಕೋರ್ಸುಗಳ ಪಠ್ಯಕ್ರಮ ಈಗಾಗಲೇ ರಚನೆಯಾಗಿರುತ್ತದೆ. ಅಧ್ಯಯನ ಮಂಡಳಿಗಳಲ್ಲಿಯೂ ಆಗಿರುತ್ತದೆ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ, ಇದು ಪಠ್ಯಕ್ರಮಗಳು ಅಧ್ಯಯನ ಮಂಡಳಿಗಳಲ್ಲಿ ಅನುಮೋದನೆಯಾಗಿದೆಯೇ, ಪರಿಶೀಲಿಸಿ ಆಗಿದ್ದರೆ ಆಯಿತು ಇಲ್ಲಾ ಅಧ್ಯಯನ ಮಂಡಳಿಗಳಿಗೆ ಮಂಡಿಸಿ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 17 ಹೊಸ ಕೋರ್ಸುಗಳನ್ನು ಪ್ರಾರಂಭ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ 117 ಕೋರ್ಸುಗಳಿವೆ ನಮ್ಮ ವಿಶ್ವವಿದ್ಯಾಲಯದಲ್ಲಿ ಕೇವಲ 45 ಕೋರ್ಸುಗಳಿವೆ. ನಾನು ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ವರ್ಷಕ್ಕೆ ಎರಡು ಹೊಸ ಕೋರ್ಸುಗಳನ್ನು ಪ್ರಾರಂಭಿಸಬೇಕು ಎಂಬ ಆಶಯ ಹೊಂದಿದ್ದೆ ಆದರೆ ಇದುವರೆಗೂ ಆಗಿಲ್ಲ. ಆದ್ದರಿಂದ ಮೇಲ್ಕಂಡ ಹೊಸ ಕೋರ್ಸುಗಳನ್ನು ಪ್ರಾರಂಭ ಮಾಡಬೇಕು ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ ಎಂದರು. ಮೇಲ್ಕಂಡ ಕೋರ್ಸುಗಳ ಪಠ್ಯಕ್ರಮ ಈಗಾಗಲೇ ರಚನೆಯಾಗಿರುತ್ತದೆ ಎಂದು ಮತ್ತೊಮ್ಮೆ ಹೇಳಿದರು.

ಈ ಬಗ್ಗೆ ಸದಸ್ಯರಾದ ಪ್ರೊ. ವಿ ಕೃಷ್ಣರವರನ್ನು ವಿಚಾರಿಸಲಾಗಿ ಹೊಸ ಕೋರ್ಸುಗಳನ್ನು ಪ್ರಾರಂಭ ಮಾಡುವುದನ್ನು ಸ್ವಾಗತಿಸಿದರು ಆದರೆ ಯಾವುದೇ ಪಠ್ಯಕ್ರಮ ರಚನೆಯಾಗಿಲ್ಲ ಈಗ ರಚನೆಯಾಗಬೇಕು ಎಂದರು. ಈಗ ತುರ್ತು ಎಂದರೆ ಪ್ರಥಮ ಸೆಮಿಸ್ಟರ್ ಪಠ್ಯಕ್ರಮವನ್ನು ತುರ್ತಾಗಿ ಸಿದ್ದಪಡಿಸಿಕೊಡಲು ತಮ್ಮ ಒಪ್ಪಿಗೆ ಸೂಚಿಸಿದರು. ವಿಶ್ವವಿದ್ಯಾಲಯದಿಂದ ಮೇಲ್ಕಂಡ ಕೋರ್ಸುಗಳ ಪಠ್ಯಕ್ರಮ ಸಿದ್ದಪಡಿಸಿ ಕೊಡಿ ಎಂದು ಆದೇಶ ನೀಡಿದಲ್ಲಿ ಕ್ರಮಕೈಗೊಳ್ಳಲಾಗುವುದು ಎಂದರು.

ಸದಸ್ಯರಾದ ಶ್ರೀ ರಮೇಶ್‌ಬಾಬುರವರು ಮಾತನಾಡಿ ಹೊಸ ಕೋರ್ಸುಗಳ ಪ್ರಾರಂಭ ಮಾಡಿದಲ್ಲಿ ಎಲ್ಲ ಸೌಲಭ್ಯಗಳು ಇದೆಯೇ ಪ್ರಾಯೋಗಿಕ ಪರೀಕ್ಷೆಗೆ ಲ್ಯಾಬೋರೇಟರಿ ಇದೆಯೇ ಇಲ್ಲದಿದಲ್ಲಿ ಇರುವುದರಲ್ಲೇ ಮಾಡಬಹುದೇ ಎಂದರು. ಮಾಡುವುದಾದಲ್ಲಿ ನಿಯಮಗಳ ಅನುಸಾರ ಪ್ರಾರಂಭಿಸಿ ಎಂದರು.

ಕುಲಸಚಿವರು ಮಾತನಾಡಿ ನಿಯಮಾನುಸಾರ ಪ್ರಾರಂಭಿಸಬೇಕು ಎಂದರೆ ಪಠ್ಯಕ್ರಮ ಸಿದ್ಧಪಡಿಸಿ. ಪ್ರಾಧಿಕಾರಗಳಲ್ಲಿ ಅನುಮೋದನೆ ಪಡೆದು ನಂತರ ವಿಭಾಗದ ಪ್ರಾರಂಭಕ್ಕೆ ಅಗತ್ಯವಿರುವ ಪರಿನಿಯಮವನ್ನು ರಚಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಬೇಕು ಎಂದರು. ಪರಿನಿಯಮ ಅನುಮೋದನೆಯಾದಲ್ಲಿ ಮಾತ್ರ, ವಿಭಾಗಗಳನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ಅಲ್ಲದೇ ಪರಿನಿಯಮದಲ್ಲಿ ವಿಭಾಗ ಪ್ರಾರಂಭದ ಜೊತೆಗೆ ವಿಭಾಗಕ್ಕೆ ಅಗತ್ಯವಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳೂ ಸೃಜನೆಯಾಗುತ್ತವೆ. ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಈ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯಾಗಿರುವುದರಿಂದ, ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಕಾಯ್ದಿರಿಸಿ ಕುಲಾಧಿಪತಿಗಳ ಅನುಮೋದನೆಗಾಗಿ ಕಳುಹಿಸಿಕೊಡಿ ಎಂದರು. ಇದು ಒಳ್ಳೆಯ ಯೋಜನೆಯಾಗಿದ್ದು ಈ ಬಾರಿಯೇ ಅಧಿಸೂಚನೆಯಲ್ಲಿ ಸೇರಿಸಿ ಎಂದರು.

ಕುಲಸಚಿವರು ಮಾತನಾಡುತ್ತಾ 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರವೇಶಕ್ಕೆ ನಾಳೆಯೇ ಅಧಿಸೂಚನೆ ಹೊರಡಿಸಬೇಕು. ತಾವು ಎಲ್ಲರೂ ಈ ಬಗ್ಗೆ ಗಮನ ವಹಿಸಿ ಪರಿನಿಯಮಗಳನ್ನು ಅನುಮೋದಿಸಿ ಕೊಡುತ್ತೇವೆ ಎಂದು ಭರವಸೆ ಕೊಟ್ಟರೆ ಅಧಿಸೂಚನೆಯಲ್ಲಿ ಸೇರಿಸುತ್ತೇವೆ ಎಂದರು.

ಮಾನ್ಯಕುಲಪತಿಗಳು ಮಾತನಾಡಿ ಪರಿನಿಯಮಗಳನ್ನು ಸರ್ಕಾರಕ್ಕೆ ಅನುಮೋದನೆಗೆ ಕಳುಹಿಸಿದ ನಂತರ ಸರ್ಕಾರದ ಹಂತದಲ್ಲಿ ತಾವು ಈ ಬಗ್ಗೆ ವೈಯಕ್ತಿಕ ಗಮನವಹಿಸಿ ಶೀಘ್ರವಾಗಿ ಅನುಮೋದನೆ ದೊರೆಯುವಂತೆ ಮಾಡುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಯಾಗಿ ಎಲ್ಲಾ ಸದಸ್ಯರುಗಳು ಈ ವಿಷಯಕ್ಕೆ ತಾವು ಸಹ ಸಹಕಾರ ನೀಡುವುದಾಗಿ ತಿಳಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗೆ ಆಫ್-ಲೈನ್ ಮೂಲಕ ಪ್ರವೇಶಕ್ಕೆ ಕೂಡಲೇ ಅಧಿಸೂಚನೆ ಹೊರಡಿಸಲು ಹಾಗೂ ಸದರಿ ಅಧಿಸೂಚನೆಯಲ್ಲಿ ಪ್ರಸ್ತಾಪಿತ ಹೊಸ ಕೋರ್ಸುಗಳಾದ M.Sc Food Technology, Nanotechnology, M.Sc. Seed Technology ಸೇರಿಸಲು ನಿರ್ಣಯಿಸಲಾಯಿತು. ಹೊಸ ಕೋರ್ಸುಗಳಿಗ ಸಂಬಂಧಿಸಿದ ಪಠ್ಯಕ್ರಮಗಳನ್ನು ಕೂಡಲೇ ಸಿದ್ಧಪಡಿಸಿ ಅಧ್ಯಯನ ಮಂಡಳಿಗಳ ಅನುಮೋದನೆ ಪಡೆದು ತುರ್ತಾಗಿ ಸಲ್ಲಿಸುವಂತೆ ಸಂಬಂಧಪಟ್ಟ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳಿಗೆ ಸೂಚಿಸಲು ನಿರ್ಣಯಿಸಲಾಯಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಸಹಿ/-
ಕುಲಪತಿಗಳು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ